# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂ.ವಿಆ/ಘತ್ಯಾಆ/ಪಿಆರ್/ 44./2015-16

ವಿಶೇಷ ಆಯುಕ್ತರು (ಘ.ತ್ಯಾ.ನಿ/ಆ)ರವರ ಕಛೇರಿ,
ಮಹಾನಗರ ಪಾಲಿಕೆ ಕಛೇರಿಗಳು,
ಎನ್.ಆರ್. ವೃತ್ತ,
ಬೆಂಗಳೂರು, ದಿನಾಂಕ: 25-01-2016

## ಸುತ್ತೋಲೆ-7

**ವಿಷಯ:** ಪ್ರತಿವಾರ ಜರುಗುವ ಸ್ವಚ್ಛತಾ ಅಂದೋಲನ ಸ್ಥಳದ ಪಟ್ಟಿಯನ್ನು ನಿಗಧಿತ ಸಮಯದಲ್ಲಿ ನೀಡುವ ಹಾಗೂ ಅಂದೋಲನದ ಬಗ್ಗೆ ಸಮರ್ಪಕವಾಗಿ ಕಾರ್ಯನಿರ್ವಹಿಸುವ ಕುರಿತು

**ಉಲ್ಲೇಖ:** ವಿಶೇಷ ಆಯುಕ್ತರವರ ಕಛೇರಿ ಪತ್ರದ ಸಂ.ವಿ.ಆ.(ಘತ್ಯಾನಿ)/ಪಿಆರ್/14/15-16 ದಿ: 14-01-2016

******

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಪ್ರತಿ ವಾರಕ್ಕೊಮ್ಮೆ ಸ್ವಚ್ಛತಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುತ್ತಿದ್ದು ಹಿರಿಯ ಅಧಿಕಾರಿಗಳನ್ನು ವಿಧಾಸಭಾ ಕ್ಷೇತ್ರವಾರು ಮೇಲ್ವಿಚಾರಣೆ ನಡೆಸಿ ವರದಿ ನೀಡಲು ನಿಯೋಜಿಸಿರುವುದು ಸರಿಯಷ್ಟೆ. ದಿ: 21-01-2016ರಂದು ಐ.ಪಿ.ಪಿ. ಮಲ್ಲೇಶ್ವರನಲ್ಲಿ ಮಾನ್ಯ ಆಯುಕ್ತರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಚರ್ಚಿಸಿದಂತೆ ಸದರಿ ಅಂದೋಲನದ ಕುರಿತು ಈ ಕೆಳಕಂಡ ವಿಷಯಗಳ ಬಗ್ಗೆ ಜರೂರಾಗಿ ಕ್ರಮಗಳನ್ನು ತೆಗೆದುಕೊಳ್ಳಲು ನಿರ್ದೇಶಿಸಲಾಗಿದೆ.

1. ಒಂದು ತಿಂಗಳ ಸ್ವಚ್ಛತಾ ಕಾರ್ಯಕ್ರಮದ ಸ್ಥಳದ ಪಟ್ಟಿಯನ್ನು ಪ್ರತಿ ತಿಂಗಳು 25ನೇ ತಾರೀಖು ಸಂಜೆ 5.00 ಘಂಟೆ ಒಳಗೆ ಕಡ್ಡಾಯವಾಗಿ ವಿಶೇಷ ಆಯುಕ್ತರು (ಘ.ತ್ಯಾ.ನಿ/ಆ)ರವರ ಕಛೇರಿಗೆ ಕಳುಹಿಸತಕ್ಕದ್ದು.

2. ಸ್ವಚ್ಛತಾ ಅಂದೋಲನವನ್ನು ವಿಧಾನಸಭಾ ಕ್ಷೇತ್ರವಾರು (ವಿಭಾಗ ಮಟ್ಟದಲ್ಲಿ) ವಾರಕ್ಕೊಮ್ಮೆ ಒಂದು ವಾರ್ಡ್‌ನ್ನು ಆಯ್ಕೆ ಮಾಡಿಕೊಂಡು ಎಲ್ಲಾ ಸಿಬ್ಬಂದಿಯನ್ನು ನೇಮಿಸಿಕೊಂಡು ಸಮರ್ಪಕವಾಗಿ ನಿರ್ವಹಿಸತಕ್ಕದ್ದು.

3. ತಮ್ಮ ವಾರ್ಡ್ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಚುನಾಯಿತ ಪ್ರತಿನಿಧಿಗಳು ಹಾಗೂ ನಗರ ಪಾಲಿಕೆ ಸದಸ್ಯರನ್ನು ಸಕ್ರಿಯವಾಗಿ ಈ ಕಾರ್ಯಕ್ರಮದಲ್ಲಿ ಭಾಗವಹಿಸುವಂತೆ ಕೋರಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸತಕ್ಕದ್ದು ಹಾಗೂ ಸ್ವಚ್ಛತಾ ಕಾರ್ಯಕ್ರಮದ ಸ್ಥಳ ನಿಗಧಿಪಡಿಸಿ ನಂತರ ಪ್ರತಿವಾರ ಸೋಮವಾರದಂದೇ ಎಲ್ಲಾ ಚುನಾಯಿತ ಪ್ರತಿನಿಧಿಗಳಿಗೆ ಹಾಗೂ ಪಾಲಿಕೆ ಸದಸ್ಯರಿಗೆ ತಿಳಿಸತಕ್ಕದ್ದು.

4. ವಾರ್ಡ್ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಸ್ಥಳೀಯ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ (RWA), NGOs, ಶುಚಿಮಿತ್ರ ಹಾಗೂ Civic ಸಂಸ್ಥೆಗಳನ್ನು ಸದರಿ ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡು ಅಂದೋಲನದ ಅವಶ್ಯಕತೆ ಹಾಗೂ ಮಹತ್ವದ ಬಗ್ಗೆ ತಿಳಿಸುವುದು ಒಟ್ಟಾರೆ ಸಮಗ್ರ ಅರಿವು ಮೂಡಿಸುವುದು. ಸ್ವಚ್ಛತಾ ಕಾರ್ಯಕ್ರಮದ ಸ್ಥಳ ನಿಗಧಿಪಡಿಸಿ ನಂತರ ಪ್ರತಿವಾರ ಸೋಮವಾರದಂದೇ ಎಲ್ಲಾ ಸ್ಥಳೀಯ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ (RWA), NGOs, ಶುಚಿಮಿತ್ರ ಹಾಗೂ Civic ಸಂಸ್ಥೆಗಳಿಗೆ ತಿಳಿಸತಕ್ಕದ್ದು.

5. ಆಯಾ ವಾರ್ಡ್ ವ್ಯಾಪ್ತಿಯಲ್ಲಿ ವಾಸಿಸುವ ಎಲ್ಲಾ ಗಣ್ಯ ವ್ಯಕ್ತಿಗಳನ್ನು ಸಕ್ರಮವಾಗಿ ಸ್ವಚ್ಛತಾ ಅಂದೋಲನದಲ್ಲಿ ಭಾಗವಹಿಸುವಂತೆ ಮನ ಒಲಿಸಿ ಕಾರ್ಯಕ್ರಮ ನಿರ್ವಹಿಕೊಂಡು ಅಂದೋಲನದ ಅವಶ್ಯಕತೆ ಹಾಗೂ ಮಹತ್ವದ ಬಗ್ಗೆ ತಿಳಿಸುವುದು ಒಟ್ಟಾರೆ ಸಮಗ್ರ ಅರಿವು ಮೂಡಿಸುವುದು. ಸ್ವಚ್ಛತಾ ಕಾರ್ಯಕ್ರಮದ ಸ್ಥಳ ನಿಗಧಿಪಡಿಸಿ ನಂತರ ಪ್ರತಿವಾರ ಸೋಮವಾರದಂದೇ ಎಲ್ಲಾ ಗಣ್ಯ ವ್ಯಕ್ತಿಗಳಿಗೆ ತಿಳಿಸತಕ್ಕದ್ದು.

6. ಸ್ವಚ್ಛತಾ ಅಂದೋಲನಾ ನಡೆಯುವ ಸುತ್ತಮುತ್ತಲಿನ ಶಾಲೆಗಳಿಗೆ ತೆರಳಿ ಶಾಲಾ ಶಿಕ್ಷಕರನ್ನು ಹಾಗೂ ಶಾಲಾ ಮಕ್ಕಳನ್ನು ಹುರಿದುಂಬಿಸಿ ಅಂದೋಲನದ ಅವಶ್ಯಕತೆ ಹಾಗೂ ಮಹತ್ವದ ಬಗ್ಗೆ ತಿಳಿಸುವುದು ಹಾಗೂ ಒಟ್ಟಾರೆ ಕಸ ವಿಂಗಡನೆ ಬಗ್ಗೆ ಸಮಗ್ರ ಅರಿವು ಮೂಡಿಸಿ ಸದರಿ ಕಾರ್ಯಕ್ರಮದಲ್ಲಿ ಭಾಗವಹಿಸುಂತೆ ಮನವೊಲಿಸಿ ಸ್ವಚ್ಛತಾ ಅಂದೋಲನಾವನ್ನು ಯಶಸ್ವಿಗೊಳಿಸತಕ್ಕದ್ದು. ಸ್ವಚ್ಛತಾ ಕಾರ್ಯಕ್ರಮದ ಸ್ಥಳ ನಿಗಧಿಪಡಿಸಿ ನಂತರ ಪ್ರತಿವಾರ ಸೋಮವಾರದಂದೇ ಶಾಲಾ ಶಿಕ್ಷಕರನ್ನು ಹಾಗೂ ಶಾಲಾ ಮಕ್ಕಳಿಗೆ ತಿಳಿಸತಕ್ಕದ್ದು. ಸದರಿ ಅಂದೋಲನದಲ್ಲಿ ಪಾಲ್ಗೊಳಲು ಒಪ್ಪಿದ್ದಲ್ಲಿ ಎಲ್ಲಾ ರೀತಿಯಲ್ಲಿ ಅನುಕೂಲವಾಗುವ ಹಾಗೆ ಸಹಕರಿಸತಕ್ಕದ್ದು ಮತ್ತು ಶಾಲಾ ಕಾಲೇಜು ಅವರಣದಲ್ಲಿ ಈ ಕುರಿತಂತೆ ಮಾಹಿತಿಯನ್ನು ಬಿತ್ತರಿಸುವುದು.

7. ಪ್ರತಿವಾರ ಕಾರ್ಯಕ್ರಮ ನಡೆಯುವ ಸ್ಥಳವನ್ನು ಮನೆಮನೆಗಳಿಂದ ಕಸ ಸಂಗ್ರಹಣೆ ಮಾಡುವ ಆಟೋಗಳ ಮೂಲಕ ಪ್ರಚುರ ಪಡಿಸತಕ್ಕದ್ದು.

8. ಸ್ವಚ್ಛತಾ ಅಂದೋಲನ ನಡೆಯುವ ಸ್ಥಳಗಳಲ್ಲಿ ಸಾರ್ವಜನಿಕರಿಗೆ ಅರಿವು ಮೂಡಿಸಿ ಸ್ಥಳೀಯ ಸಾರ್ವಜನಿಕರನ್ನು ಸದರಿ ಕಾರ್ಯಕ್ರಮದಲ್ಲಿ ತೊಡಗಿಸಿಕೊಳ್ಳುವಂತೆ ಪ್ರಚೋದನೆ ಪಡಿಸುವುದು.

9. ವಾರ್ಡ್ ವ್ಯಾಪ್ತಿಯಲ್ಲಿ ಎಲ್ಲೆಲ್ಲಿ ಐತಿಹಾಸಿಕ ಮಣ್ಣಿನ ಗುಡ್ಡೆ/ಹೂಳು/ಕಸದ ರಾಶಿ ಇರುತ್ತವೆ ಅಂತಹ ಸ್ಥಳಗಳನ್ನು ಸ್ವಚ್ಛಗೊಳಿಸಲು ಆದ್ಯತೆ ಮೇರೆಗೆ ಕ್ರಮ ವಹಿಸುವುದು.

10. ಮಳೆ ಬಂದಾಗ ಯಾವ ಸ್ಥಳದಲ್ಲಿ ನೀರು ನಿಲ್ಲುತ್ತದೆ ಅಂತಹ ಸ್ಥಳಗಳನ್ನು ಗುರುತಿಸಿ ಚರಂಡಿ ಮತ್ತು ತೋಳು ಚರಂಡಿ ಸ್ವಚ್ಛಗೊಳಿಸುವುದು.

ಸದರಿ ಕಾರ್ಯಕ್ರಮದ ಛಾಯಾಚಿತ್ರಗಳನ್ನು ತೆಗೆದು ವಾಟ್ಸ್ಯಾಪ್ ಮೂಲಕ ಈಗಾಗಲೇ ನೀಡಿರುವ ಮೊಬೈಲ್ ಸಂ.9738257572 ಗೆ ವಿನೋದ್, ಪ್ರಥಮ ದರ್ಜೆ ಸಹಾಯಕರು ಇವರಿಗೆ ಕಡ್ಡಾಯವಾಗಿ ಕಳುಹಿಸುವುದು ಹಾಗೂ ಫೇಸ್‌ಬುಕ್ www.facebook.com/bbmpswm ಗೆ ಅಪ್‌ಲೋಡ್ ಮಾಡುವುದು.

25.1.16.
ವಿಶೇಷ ಆಯುಕ್ತರು,
(ಘನ ತ್ಯಾಜ್ಯ/ಆರೋಗ್ಯ)

ಪ್ರತಿಯನ್ನು:

1) ಪೂಜ್ಯ ಮಹಾಪೌರರ ಆದ್ಯ ಗಮನಕ್ಕೆ ತರಲು ಆಪ್ತ ಶಾಖೆಗೆ ಸಲ್ಲಿಸಿದೆ.
2) ಉಪ ಮಹಾಪೌರರ ಆದ್ಯ ಗಮನಕ್ಕೆ ತರಲು ಆಪ್ತ ಶಾಖೆಗೆ ಸಲ್ಲಿಸಿದೆ.
3) ಅಧ್ಯಕ್ಷರು ಆರೋಗ್ಯ ಸ್ಥಾಯಿ ಸಮಿತಿ ರವರ ಗಮನಕ್ಕೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
4) ಆಯುಕ್ತರು, ಗಮನಕ್ಕೆ ತರಲು ಆಪ್ತ ಶಾಖೆಗೆ ಸಲ್ಲಿಸಿದೆ. for Raudhu 28/1/2015
5) ವಿಶೇಷ ಆಯುಕ್ತರು, (ಯೋಜನೆ), (ಹಣಕಾಸು), (ಕಲ್ಯಾಣ) ರವರಿಗೆ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.
6) ಜಂಟಿ ಆಯುಕ್ತರು (ಆರೋಗ್ಯ ಮತ್ತು ಘನತ್ಯಾಜ್ಯ ನಿರ್ವಹಣೆ) ರವರಿಗೆ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.
7) ಎಲ್ಲಾ ವಲಯ ಅಪರ/ಜಂಟಿ ಆಯುಕ್ತರುಗಳಿಗೆ ಮುಂದಿನ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ ಹಾಗೂ ಚುನಾಯಿತ ಜನ ಪ್ರತಿನಿಧಿಗಳಿಗೆ, ಪಾಲಿಕೆ ಸದಸ್ಯರಿಗೆ, RWA, NGOs, Civic ಸಂಸ್ಥೆ ಶುಚಿಮಿತ್ರ ರವರಿಗೆ ಸದರಿ ಅಂದೋಲನದಲ್ಲಿ ಪಾಲ್ಗೊಳುವಂತೆ ಮನವೊಲಿಸತಕ್ಕದ್ದು.
8) ಎಲ್ಲಾ ವಲಯ ಮುಖ್ಯ ಅಭಿಯಂತರರುಗಳಿಗೆ ಮುಂದಿನ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ ಹಾಗೂ ಚುನಾಯಿತ ಜನ ಪ್ರತಿನಿಧಿಗಳಿಗೆ, ಪಾಲಿಕೆ ಸದಸ್ಯರಿಗೆ, RWA, NGOs, Civic ಸಂಸ್ಥೆ ಶುಚಿಮಿತ್ರ ರವರಿಗೆ ಸದರಿ ಅಂದೋಲನದಲ್ಲಿ ಪಾಲ್ಗೊಳುವಂತೆ ಮನವೊಲಿಸತಕ್ಕದ್ದು..
9) ಎಲ್ಲಾ ವಲಯ ಅಧೀಕ್ಷಕ ಅಭಿಯಂತರರುಗಳಿಗೆ ಮುಂದಿನ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ ಹಾಗೂ ಚುನಾಯಿತ ಜನ ಪ್ರತಿನಿಧಿಗಳಿಗೆ, ಪಾಲಿಕೆ ಸದಸ್ಯರಿಗೆ, RWA, NGOs, Civic ಸಂಸ್ಥೆ ಶುಚಿಮಿತ್ರ ರವರಿಗೆ ಸದರಿ ಅಂದೋಲನದಲ್ಲಿ ಪಾಲ್ಗೊಳುವಂತೆ ಮನವೊಲಿಸತಕ್ಕದ್ದು.
10) ಸಾರ್ವಜನಿಕ ಸಂಪರ್ಕಾಧಿಕಾರಿಗಳಿಗೆ ಮಾಹಿತಿಗಾಗಿ ಕಳುಹಿಸಿದೆ.
11) ಕಛೇರಿ ಕಡತಕ್ಕೆ.

27/1/16